ಓ ಎಸ್ ನಂ. 182/2020
ಪಿ ಡಬ್ಲ್ಯೂ: 1
ದಿನಾಂಕ 06-04-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ: ಶ್ರೀ ಎನ್ ಎಸ್ ವಕೀಲರಿಂದ:

ನಾನು 8 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದು, ನನಗೆ ಓದು ಬರಹ ಬರುತ್ತದೆ. ದಾವಾ ಬಿ ಶೆಡ್ಯೂಲ್ ಆಸ್ತಿ ಸರ್ವೆ ನಂ.25/2 ರಲ್ಲಿ 6 ಎಕರೆ 27 ಗುಂಟೆ ಜಮೀನು ಇದೆ. ದಾವಾ ಆಸ್ತಿಗಳು ನನಗೆ ನನ್ನ ತಾಯಿ ಮನೆಯಿಂದ ಬಂದಿರುತ್ತದೆ. ನನ್ನ ತಾಯಿ ಮತ್ತು ನನ್ನ ಹೆಸರಿನಲ್ಲಿ ಜಂಟಿ ಖಾತೆ ಇದ್ದು, ನನ್ನ ತಾಯಿ ಮರಣ ಹೊಂದಿದ ನಂತರ ನನ್ನ ಹೆಸರಿಗೆ ಬಂದಿರುತ್ತದೆ. ನನ್ನ ಹೆಸರಿನಲ್ಲಿರುವ ಪಹಣಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಂತಹ ದಾಖಲೆಗಳನ್ನು ಹಾಜರುಪಡಿಸದೆ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ನೋಡಿರುತ್ತೇನೆ.

ನನ್ನ ತಂದೆ ಮರಣ ಹೊಂದಿದ ನಂತರ ನನ್ನ ತಾಯಿ ಹೆಸರಿಗೆ ಬಂದಿದ್ದು, ನನ್ನ ತಾಯಿ ಮರಣ ಹೊಂದಿದ ನಂತರ ನನ್ನ ಹೆಸರಿಗೆ ಬಂದಿದೆ ಎಂದು ತೋರಿಸಲು ನಾನು ದಾಖಲೆಯನ್ನು ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು ಕಂದಾಯವನ್ನು ನನ್ನ ಹೆಸರಿನಲ್ಲೆ ನಾನೇ ಕಟ್ಟುತ್ತಿದ್ದೇನೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯ ಪೂರ್ವ, ಪಶ್ಚಿಮ ಮತ್ತು ಉತ್ತರಕ್ಕೆ ಶಿವಕುಮಾರ್ ರವರ ಜಮೀನು, ದಕ್ಷಿಣಕ್ಕೆ ನಮ್ಮ ಜಮೀನು ನಂತರ ಅಂಬಾಭವಾನಿ ದೇವಾಲಯ ಇರುತ್ತದೆ. ನನ್ನ ಜಮೀನಿನ ನಂತರ ಅಂಬಾಭವಾನಿ ದೇವಾಲಯ ಬರುತ್ತದೆ ಎಂದು ನನ್ನ ವಾದಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

ನನ್ನ ತಾಯಿ ಹೆಸರು ಶಾರದಮ್ಮ. ನನ್ನ ತಾಯಿ ಮರಣ ಹೊಂದಿ ಸುಮಾರು 30 ವರ್ಷಗಳಾಗಿರುತ್ತವೆ. ದಾವಾ ಆಸ್ತಿಗೆ ನಾನೇ ಮಾಲೀಕರು

ಮತ್ತು ಸ್ವಾಧೀನದಾರಳು ಎಂದು ತೋರಿಸಲು ಮೂಲ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಯಾವ ಆಧಾರದ ಮೇಲೆ ನಿಮ್ಮ ಹೆಸರಿಗೆ ಖಾತೆ ಬಂದಿದೆ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ತಾಯಿ ಮರಣ ಹೊಂದಿದ ನಂತರ ನಾನು ಒಬ್ಬಳೆ ಮಗಳು ಆದ ಕಾರಣ ಆ ಆಧಾರದ ಮೇಲೆ ನನ್ನ ಹೆಸರಿಗೆ ಬಂದಿರುತ್ತದೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಗೆ ಸಂಬಂದಪಟ್ಟಂತೆ 2020 ರಲ್ಲಿ ಎರಡು ಸಲ ಸರ್ವೆ ಆಗಿರುತ್ತದೆ. ಸರ್ವೆ ಆಗಿರುವ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಅಂತಹ ಯಾವುದೇ ದಾಖಲಾತಿಗಳನ್ನು ನಾನು ಹಾಜರುಪಡಿಸದೆ ಇದ್ದರೂ ಹಾಜರುಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಹದ್ದು ಬಸ್ತು ನಕ್ಷೆಯನ್ನು ಮಾಡಿಸುವಾಗ ನಿಮ್ಮ ಜಮೀನಿನ ಅಕ್ಕಪಕ್ಕದವರಿಗೆ ನೋಟೀಸು ನೀಡಿರುವ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನೋಟೀಸು ಕೊಡಿಸಿರುತ್ತೇನೆ ಎಂದು ನುಡಿದಿರುತ್ತಾರೆ. ನೋಟೀಸು ಕೊಡಿಸಿರುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-2 ರ ದಾಖಲೆಯನ್ನು ಸರ್ವೆ ಇಲಾಖೆಯಿಂದ ಪಡೆದು ಹಾಜರುಪಡಿಸಿಲ್ಲ ಅದನ್ನು ಉಪತಹಸೀಲ್ದಾರ್, ಸಖರಾಯಪಟ್ಟಣ ಇಲ್ಲಿಂದ ಪಡೆದು ಹಾಜರುಪಡಿಸಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-2 ರ ದಾಖಲೆಯಲ್ಲಿ ಸರ್ವೆ ಇಲಾಖೆಯ ಸೀಲು ಇಲ್ಲ ಎಂದರೆ ನಿಜ. ಉಪತಹಸೀಲ್ದಾರ್ ರವರಿಗೆ ಹದ್ದು ಬಸ್ಸು ಸರ್ವೆ ಮಾಡುವ ಅಧಿಕಾರ ಇಲ್ಲ ಎಂದರೆ ನನಗೆ ಗೊತ್ತಿಲ್ಲ.

ಕಂದಾಯ ಇಲಾಖೆ ಮತ್ತು ಗಣಿಗಾರಿಕೆ ಇಲಾಖೆಯವರು ಸೇರಿ ನಮ್ಮ ಜಮೀನನ್ನು ಜಂಟಿ ಸರ್ವೆ ಮಾಡಿರುತ್ತಾರೆ. ಗಣಿಗಾರಿಕೆ ಇಲಾಖೆಯವರು ಸರ್ವೆ ಮಾಡಿರುವುದನ್ನು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ನಿಜ. ಸದರಿ ದಾಖಲೆ ನನ್ನ ಬಳಿ ಇರಬಹುದು ಅದನ್ನು ಹಾಜರುಪಡಿಸುತ್ತೇನೆ. ನನಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು

ಇಬ್ಬರು ಗಂಡು ಮಕ್ಕಳು. ಅವರೆಂದರೆ 1.ವೀಣಾ 2. ವೇಣು 3. ನಟರಾಜ ಮತ್ತು 4. ಅಶ್ವಿನಿ. ನಾನು ಮತ್ತು ನನ್ನ ಮಕ್ಕಳು ಸೇರಿ 6 ಎಕರೆ 20 ಗುಂಟೆ ಜಮೀನಿನಲ್ಲಿ ಸ್ವಾಧೀನ ಇದ್ದೇವೆಂದು ಕೆನರಾ ಬ್ಯಾಂಕ್ ಸಖರಾಯಪಟ್ಟಣ ಇಲ್ಲಿ ಸಾಲ ಪಡೆದಿರುತ್ತೇವೆ ಎಂದರೆ ನಿಜ. ಬ್ಯಾಂಕಿನಲ್ಲಿ ಒತ್ತುವರಿಯಾಗಿರುವ ಬಗ್ಗೆ ನೀವು ಹೇಳಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ನಾವು ಸಾಲ ಪಡೆಯುವ ಕಾಲಕ್ಕೆ ಸರ್ವೆ ಆಗಿರಲಿಲ್ಲ ಎಂದು ನುಡಿದಿರುತ್ತಾರೆ.

ಜಮೀನಿನಲ್ಲಿ ನಾನು ಹುಟ್ಟಿದಾಗಿನಿಂದಲೂ ಸ್ವಾಧೀನ ಇದ್ದೇವೆ. ನಮ್ಮ ಜಮೀನಿನ ಸುತ್ತು ಬೇಲಿ ನಾವು ಹಾಕಿರುವುದಿಲ್ಲ. ಪ್ರತಿವಾದಿ ಜಮೀನು ನಮ್ಮ ಜಮೀನಿನ ಮೂರು ದಿಕ್ಕಿಗೂ ಇದ್ದು ಅವರು ಬೇಲಿ ಹಾಕಿರುತ್ತಾರೆ. ಪ್ರತಿವಾದಿ ಸ್ವಾಧೀನಕ್ಕೆ ಬಂದು ಸುಮಾರು 8-10 ವರ್ಷದಿಂದ ಇದ್ದಾರೆ. ಪ್ರತಿವಾದಿ ಸದರಿ ಜಮೀನುಗಳನ್ನು ಬೇರೆಯವರಿಂದ ಖರೀದಿಸಿದ್ದಾರೆ ಎಂದರೆ ನಿಜ. ಅವರು ಜಮೀನುಗಳನ್ನು ಖರೀದಿಸಿದ ನಂತರ ಸರ್ವೆ ಮಾಡಿಸಿ ಬೇಲಿ ಹಾಕಿದ್ದಾರೆ ಎಂದರೆ ನಿಜ. ಪ್ರತಿವಾದಿ ಖರೀದಿಸಿದ ಜಮೀನನ್ನು ಸರ್ವೆ ಮಾಡುವ ಕಾಲಕ್ಕೆ ನನ್ನ ಇಬ್ಬರು ಗಂಡು ಮಕ್ಕಳು ಇದ್ದರು. ಸರ್ವೆಗೆ ನನ್ನ ಗಂಡು ಮಕ್ಕಳು ಸಹಿ ಮಾಡಿಲ್ಲ, ನಾನು ಸಹಿ ಮಾಡಿರುತ್ತೇನೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.